ಬೆಲೆ ಸ್ಥಿರೀಕರಣ ಸಚಿವ ಸಂಪುಟ ಉಪ ಸಮಿತಿ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ

9. ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಸಹಕಾರ ಇಲಾಖೆ
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

ಕೃಷಿ ಇಲಾಖೆಯಲ್ಲಿ ಖಾಲಿ ಹುದ್ದೆಗಳು

292(697); ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕೃಷಿ ಇಲಾಖೆಗೆ ಮಂಜೂರಾಗಿರುವ ಎಲ್ಲ ಬಗೆಯ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ಭರ್ತಿಯಾಗಿವೆ ಮತ್ತು ಯಾವ ಯಾವ ಹುದ್ದೆಗಳು ಎಷ್ಟು ಸಮಯದಿಂದ ಖಾಲಿ ಇವೆ; ಇದಕ್ಕೆ ಕಾರಣಗಳೇನು;

ಇ) ಈ ಭಾಗದ ಜಿಲ್ಲೆಗಳಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವುದರಿಂದ ರೈತರು ಮತ್ತು ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಿಗೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿವೆ.

ಕೃಷಿ ಇಲಾಖೆ – 2145

ಜಲಾನಯನ ಅಭಿವೃದ್ಧಿ ಇಲಾಖೆ – 374

ಒಟ್ಟು – 2519

ಆ) ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ: ಕೃಷಿ ಇಲಾಖೆ – 1044

ಜಲಾನಯನ ಅಭಿವೃದ್ಧಿ ಇಲಾಖೆ – 211

ಒಟ್ಟು – 1255

ಕಳೆದ ಒಂದು, ಎರಡು, ವರ್ಷಗಳಲ್ಲಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಮತ್ತು ಸ್ವಯಂ ನಿವೃತ್ತಿ ಪಡೆದಿರುವುದರಿಂದ ಖಾಲಿಯಿರುತ್ತವೆ.

ಇ) ಬಂದಿರುತ್ತದೆ.

ಈ) ಖಾಲಿ ಹುದ್ದೆಗಳನ್ನು ಹಂತಹಂತವಾಗಿ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಹೋಬಳಿ ಮಟ್ಟದಲ್ಲಿ ಆತ್ಮಯೋಜನೆಯಡಿ ತಾಂತ್ರಿಕ ಅಧಿಕಾರಿಗಳು ನೇಮಿಸಲಾಗಿದೆ. ಮುಂದುವರೆದು ರೈತಸಂಪರ್ಕ ಕೇಂದ್ರಗಳಿಗೆ ಗುತ್ತಿಗೆ ಆಧಾರದ ಮೇಲೆ ಪದವೀಧರರನ್ನು ಲೆಕ್ಕಪತ್ರ ನಿರ್ವಹಣೆಗಾಗಿ ಹಾಗೂ ಅನುವುಗಾರರನ್ನು ಗ್ರಾಮಮಟ್ಟದಲ್ಲಿ ನೇಮಿಸಿಕೊಳ್ಳಲಾಗಿದೆ. ಮತ್ತು ಕೆಲವು ವೃಂದದ ಹುದ್ದೆಗಳನ್ನು ಹಂತಹಂತವಾಗಿ ತುಂಬಲು ಕ್ರಮ ಕೈಗೊಳ್ಳಲಾಗಿದೆ. ರೇಷ್ಮೆ ಇಲಾಖೆಯಿಂದ ನಿಯೋಜನೆ ಮೇಲೆ ಬಂದ ನೌಕರರನ್ನು ಸಹಾಯಕ ಕೃಷಿ ಅಧಿಕಾರಿ ಹುದ್ದೆ ಎದುರು ನಿಯೋಜನೆ ಮೇಲೆ ನೇಮಿಸಲಾಗಿದೆ. ಅಲ್ಲದೆ ಸರ್ಕಾರದ ಅಧಿಸೂಚನೆ ಸಂಖ್ಯೆ:DPAR 06 PLX 2012 Bangalore, dated: 06.11.2013 ರ ಮತ್ತು ಈ ಸಂಬಂಧವಾಗಿ

ದಿನಾಂಕ 17.01.2014, 29.01.2014 ಅಧಿಸೂಚನೆಗಳಲ್ಲಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಹೊನ್ನಾವರ ಶರಾವತಿ ಸೇತುವೆಯ ಸುಂಕ ವಸೂಲಿ

293(445); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

ಅ) ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಿಂದ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಶರಾವತಿ ಸೇತುವೆಯಲ್ಲಿ ಶುಲ್ಕ ವಸೂಲಾತಿ ಮಾಡುತ್ತಿದ್ದು ಇದನ್ನು ಯಾವಾಗ ಅಂತ್ಯಗೊಳಿಸಲಾಗುತ್ತದೆ;

ಆ) ಈ ಸೇತುವೆಯಲ್ಲಿ ಶುಲ್ಕ ವಸೂಲಾತಿಯಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ಬಂದ ಆದಾಯ ಎಷ್ಟು;

ಇ) ಇಲ್ಲಿಯವರೆಗೆ ಶುಲ್ಕ ವಸೂಲಾತಿಗಾಗಿ ಯಾರು ಯಾರಿಗೆ ಗುತ್ತಿಗೆ ನೀಡಲಾಗಿದೆ; (ವರ್ಷವಾರು ಮಾಹಿತಿ ನೀಡುವುದು)

ಈ) 2014–15ನೇ ಸಾಲಿನಲ್ಲಿ ಶುಲ್ಕ ವಸೂಲಾತಿಗಾಗಿ ಯಾವಾಗ ಟೆಮಡರ್ ಕರೆಯಲಾಗಿತ್ತು? (ಸಂಪೂರ್ಣ ವಿವರ ನೀಡುವುದು)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ – 66 (ರಾಷ್ಟ್ರೀಯ ಹೆದ್ದಾರಿ 17ರ) ಕಿ.ಮೀ. 198.00 ರಲ್ಲಿ ಶರಾವತಿ ಸೇತುವೆ ಶುಲ್ಕ ವಸೂಲಾತಿ ಕೇಂದ್ರವಿದ್ದು, ಶುಲ್ಕ ವಸೂಲಾತಿಗಾಗಿ ಈಗಿನ ಗುತ್ತಿಗೆ ಅವಧಿಯ ದಿನಾಂಕ 31–03–2015 ರಂದು ಅಂತ್ಯಗೊಳ್ಳುತ್ತದೆ. ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ 16–07–2008 ರಂದು ಭಾರತ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದಂತೆ ಈ ಶುಲ್ಕ ವಸೂಲಾತಿಯು ನಿರಂತರವಾಗಿ ಇರುತ್ತದೆ. ದಿನಾಂಕ 12–03–2014 ರಿಂದಲೇ ಸದರಿ ರಸ್ತೆಯನ್ನು